


## ಸಕಾಲಿಕ ಲೇಖನ

‘ಕಿವಿ ಕೇಳಿಸುತ್ತಿದೆಯೇ?’, ಡಾ.ಎಂ.ಎಸ್.ಜೆ. ನಾಯಕ್ ಅವರ ಮುಖಪುಟ ಲೇಖನ (ಸುಧಾ, ಮೇ 24) ಸಕಾಲಿಕ. ಇಂದು ಕಣ್ಣಿಗೆ ಹಾಗೂ ಕಿವಿಗೆ ವಿಪರೀತ ಶ್ರಮವನ್ನು ನೀಡುವುದು ಟೀವಿ. ಅಬಾಲವೃದ್ಧರಾದಿಯಾಗಿ ಸರ್ವರೂ ಸದಾ ಕಾಲ ಟಿ.ವಿ. ಮುಂದೆ ಕುಳಿತು ವೀಕ್ಷಿಸುವುದು ಹಾಗೂ ಯಾವಾಗಲೂ ಕಿವಿಯಲ್ಲಿ ಮೊಬೈಲ್ ಇಟ್ಟು ಮಾತಾಡಿಕೊಂಡು, ಕಣ್ಣಿಗೆ ಹಾಗೂ ಕಿವಿಗೆ ತುಂಬಾ ಶ್ರಮ ಕೊಡುತ್ತಿದ್ದಾರೆ. ಕಿವಿಯ ಸಾಮರ್ಥ್ಯವನ್ನು ದಿನೇ ದಿನೇ ಕುಗ್ಗಿಸುತ್ತಾ ದೇಶದಲ್ಲಿ ಅಂಧರ ಮತ್ತು ಕಿವುಡರ ಸಂಖ್ಯೆಯನ್ನು ಜಾಸ್ತಿ ಮಾಡಿಕೊಳ್ಳುತ್ತಿರುವುದು ದುಃಖದ ಸಂಗತಿ.

—ಎ.ಕೆ. ಅನಂತಮೂರ್ತಿ ಬೆಂಗಳೂರು, ಮಧುರ ಸುಬ್ರಹ್ಮಣ್ಯ ಬೆಂಗಳೂರು, ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಎ.ಕೆ. ಪಟ್ಟಾಭಿ ಬೆಂಗಳೂರು

## ಶ್ರವಣ ದೋಷ ನೀಗಿಸಬೇಕು

ಪ್ರಸ್ತುತ ದಿನಗಳಲ್ಲಿ ಶ್ರವಣ ದೋಷದ ಸಮಸ್ಯೆಯ ಬಗ್ಗೆ ಕೂಗಿ ಹೇಳಿದಂತಿದೆ. ಸತತವಾಗಿ ಅರ್ಧ ಗಂಟೆಗಿಂತ ಹೆಚ್ಚು ಇಯರ್‌ಫೋನ್ ಹಾಕಿ ಹಾಡು ಕೇಳಿಸಿಕೊಳ್ಳಬಾರದು. ಕಿವಿಗೆ ಬಡ್ಸ್ ಹಾಕುವುದು ಸರಿಯಲ್ಲ. ತೆಂಗಿನೆಣ್ಣೆ ಮುಂತಾದ ಇತರ ಎಣ್ಣೆಗಳನ್ನು ಕಿವಿಯೊಳಗೆ ಸುರಿಯುವುದು ಖಂಡಿತಾ ತಪ್ಪು. ಕಿವಿಯನ್ನು ನೀರು ಹಾಕಿ ಸ್ವಚ್ಛಗೊಳಿಸುವುದು ಸರಿಯಾದ ಕ್ರಮ ಎಂಬ ಮಾಹಿತಿ ಉಪಯುಕ್ತದ್ದಾಗಿದೆ.

—ವಿ. ಹೇಮಂತಕುಮಾರ, ಬೆಂಗಳೂರು, ಗಾಣಧಾಳು ರಾಮಣ್ಣ ಚಿತ್ರದುರ್ಗ

## ಚಿಂತನಾರ್ಹ

‘ನಿಮ್ಮೊಡನೆ’ಯಲ್ಲಿ ‘ಪ್ರಶಸ್ತಿ ಪ್ರದಾನ; ತಾರತಮ್ಯ ಸಲ್ಲದು’ (ರಘುನಾಥ ಚ.ಹ.) ಚಿಂತನಾರ್ಹ ಬರಹ.

—ಮುಕುಂದ ಹೆರಕಲ್ಲ, ಕಲಬುರ್ಗಿ

## ಮಾತಿಗಿಂತ ಮೌನಕ್ಕೆ ಬೆಲೆ

‘ವಿಚಾರ ಲಹರಿ’ಯಲ್ಲಿ ‘ಮಾತಿನ ಸುತ್ತಮುತ್ತ’ (ಅಲೇಖ) ಅರ್ಥಪೂರ್ಣ.

—ಮಹಾವೀರ ಕಾಸರ, ಶಿವಮೊಗ್ಗ, ಎಚ್. ಆನಂದ್ ಕುಮಾರ್ ಚಿತ್ರದುರ್ಗ

## ಕೊಡೈಕೆನಾಲ್ ಪ್ರವಾಸ

‘ಕಾಡಿನ ಕೊಡುಗೆ ಕೊಡೈಕೆನಾಲ್’ (ಸುಘೋಷ ನಿಗಳೆ) ಪ್ರವಾಸ ಲೇಖನ ಚೆನ್ನಾಗಿದೆ. ಹಸಿರು ಪರಿಸರ, ಹವಾಮಾನ, ಜಲಸಂಪತ್ತಿನಿಂದ ಕೂಡಿದ್ದರೂ ಅಲ್ಲಿನ ಪೇಟೆ ಬೀದಿಗಳು ಸ್ವಚ್ಛವಿಲ್ಲದೆ ಪ್ರವಾಸಿಗರಿಗೆ ಮುಜುಗರ ತರಿಸುತ್ತದೆ. ಸ್ವಚ್ಛ ಭಾರತದ ಚಿಂತನೆ ಅಲ್ಲಿಗೆ ಬೇಕು. ಲೇಖನ ಈ ನಿಟ್ಟಿನಲ್ಲಿ ಉತ್ತಮ ಮಾರ್ಗದರ್ಶನ ನೀಡಿದೆ.

—ಕೋಟೇಶ್ವರ ಸೂರ್ಯನಾರಾಯಣ ರಾವ್ ಬೆಂಗಳೂರು

## ಯುವತಿಯರಿಗೆ ಎಚ್ಚರಿಕೆ

ಕಾಮಧೇನು ಪುಟದಲ್ಲಿ ‘ಜೀರೋ ಫಿಗರ್ ಡೇಂಜರ್’(ಡಾ.ಶೈಲಜಾ ಕೆ.ಆರ್.) ಲೇಖನ ಯುವತಿಯರಿಗೆ ಕಣ್ತೆರೆಸುವ, ಎಚ್ಚರಿಕೆ ನೀಡುವ ಪ್ರಯತ್ನವಾಗಿದೆ.

—ಬಿ. ಚಂದ್ರೇಗೌಡ, ಬೆಂಗಳೂರು

## ಬಹೂಪಯೋಗಿ ಜೀರ್ಕ

‘ಜೀರ್ಕನ ಹಣ್ಣು’ (ಹಾದಿಗಲ್ಲು ಸರಸ್ವತಿ ರಾಘವೇಂದ್ರ) ಲೇಖನದಲ್ಲಿ ತಿಳಿಸಿದಂತೆ ಇದರ ಮರ, ಹಣ್ಣು, ಎಲೆಗಳೆಲ್ಲವೂ ಉಪಯುಕ್ತ.

—ಮೇ.ಗೋ. ಸುಬ್ಬಣ್ಣ ಶಿವಮೊಗ್ಗ

## ಭಾವೈಕ್ಯದ ಹರಿಕಾರ

‘ಇಬ್ರಾಹಿಂ ಸುತಾರನೆಂಬ ಕನ್ನಡದ ಕಬೀರ’ (ಗಣೇಶ ಜೋಷಿ) ಲೇಖನ ಬಹಳ ಚೆನ್ನಾಗಿದೆ. ಪದ್ಮಶ್ರೀ, ರಾಜ್ಯೋತ್ಸವ, ಕರ್ನಾಟಕ ಕಲಾಶ್ರೀ, ಶರಣ ಸಂಸ್ಕೃತಿ, ಕನ್ನಡ ಕಬೀರ ಮುಂತಾದ ಪ್ರಶಸ್ತಿಗಳಿಗೆ ಭಾಜನರಾದ ಇವರಿಗೆ ಭಾವೈಕ್ಯದ ಹರಿಕಾರ ಎಂಬ ಹೆಸರೂ ಇದೆ.

—ಪಿ. ಜಯವಂತ ಪೈ, ಕುಂದಾಪುರ

## ಸತ್ಯದ ತಲೆ ಮೇಲೆ ಹೊಡೆದಂತಿದೆ!

ಹಾಸ್ಯ, ‘ಅಪ್ ಟು ಡೇಟ್ ಜ್ಯೋತಿಷ್ಯ’ (ಇ.ಆರ್.ರಾಮಚಂದ್ರನ್ ಮೈಸೂರು) ಬರಹ ಪೂರ್ತಿ ಓದಿದಾಗ, ಜ್ಯೋತಿಷಿಗಳಿಗೆ ತಮ್ಮ ಜ್ಯೋತಿಷ್ಯ ಭವಿಷ್ಯ ತಮಗೇ ತಿಳಿದಿರುವುದಿಲ್ಲ ಎನ್ನುವುದು ಗೊತ್ತಾಯಿತು. 9 ಸುಳ್ಳು ಒಂದು ಸತ್ಯ ಹೇಳಿ ಹೊಟ್ಟೆ ಹೊರೆದುಕೊಳ್ಳುತ್ತಿರುವ ಇಂದಿನ ಆಧುನಿಕ ಜ್ಯೋತಿಷಿಗಳ ಬಗ್ಗೆ ‘ಸತ್ಯದ ತಲೆಯ ಮೇಲೆ ಹೊಡೆದು ಬರೆದಂತಿದೆ’ ಈ ಬರಹ.

—ನಾರಾಯಣ ಯಾಜಿ, ಶಿರಾಲಿ

## ಕಥೆ ಚೆನ್ನಾಗಿದೆ

‘ಕರಗಿದ ಕಾರ್ಮುಗಿಲು’, ಕೆ.ವಿ. ರಾಜಲಕ್ಷ್ಮಿ ಅವರ ಕಥೆ ಚೆನ್ನಾಗಿದೆ.

—ಎಸ್. ವಿಜಯಕುಮಾರಿ ಬೆಂಗಳೂರು, ಕೊಹಿಮ ಬಸರಕೋಡು

## ರಾಸುಗಳ ವ್ಯಾಪಾರ

‘ನಿಮ್ಮ ಪುಟ’ದಲ್ಲಿ ‘ರಾಸುಗಳ ವ್ಯಾಪಾರ’ ಬರಹ (ಮಯೂರ್ ಎಸ್. ತಾಂಡೇಲ) ಚೆನ್ನಾಗಿದೆ. ಇದು ಹಿಂದೆ ನಡೆಯುತ್ತಿತ್ತು. ಈಗ ಜಾನುವಾರುಗಳ ಮಾರಾಟವೂ ಎ.ಪಿ.ಎಂ.ಸಿ. ಕಾಯ್ದೆ ವಹಿವಾಟು. ಇಲ್ಲಿ ಟೆಂಡರು ಮತ್ತು ಬಹಿರಂಗ ಹರಾಜು ಮಾತ್ರ ಸಿಂಧು.

—ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

## ಉಪಯುಕ್ತ

ಫಿಟ್‌ನೆಸ್ ಅಂಕಣದಲ್ಲಿ ‘ಮಕ್ಕಳಿಗೆ ಹೆಲ್ತ್ ಡ್ರಿಂಗ್ಸ್ (ಡಾ. ಎಂ.ಡಿ. ಸೂರ್ಯಕಾಂತ) ಅಗತ್ಯವೇ? ಕಿರು ಲೇಖನ ಉಪಯುಕ್ತ.

—ನರೇಂದ್ರ ಸಿರಕಜೆ ಮೈಸೂರು

## ತಪ್ಪಾಗಿದೆ

‘ನಗೆಹೊನಲು’ ಪುಟದ ಏಳನೆ ವ್ಯಂಗ್ಯಚಿತ್ರದ ಅಡಿಬರಹ ಹಾಗೂ ಎಂಟನೆ ವ್ಯಂಗ್ಯಚಿತ್ರದ ಅಡಿಬರಹ ಒಂದೇ ಆಗಿದ್ದು ತಪ್ಪಾಗಿದೆ.

—ಕೆ.ರಾಮದಾಸ ಉಡುಪ, ಎಸ್.ವಿ. ಶಿವಕುಮಾರ್ ಬೆಂಗಳೂರು

(ಹೌದು, ತಪ್ಪಾಗಿದೆ. ಸಂ)


ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ



ಶ್ರೀ ಸಾಯಿಬಾಬ ಉಪಾಸಕರು

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ

ಕೇವಲ 5 ದಿನದಲ್ಲಿ

100% ಪರಿಹಾರ ಶತಸಿದ್ಧ

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ. ಬೆಂಗಳೂರು. 9620444460